ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
ಅಂತರ್ಜಾಲ : www.kptcl.com

ಇ-ಮೇಲ್ ವಿಳಾಸ :director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

ಸಂಖ್ಯೆ: ಕವಿಪ್ರನಿನಿ/ಬಿ59/2156/2019-20 ದಿನಾಂಕ : 18 JUN 2020

## ಸಭೆಯ ಸೂಚನಾ ಪತ್ರ

ವಿಷಯ: ಸಹಾಯಕ ಇಂಜಿನಿಯರ್ (ವಿ) ರವರುಗಳ ಪರೀಕ್ಷಾರ್ಥ ಅವಧಿಯನ್ನು ಘೋಷಿಸುವ ಬಗ್ಗೆ.

ಉಲ್ಲೇಖ:
1. ನಿಗಮ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17, ದಿನಾಂಕ: 08.09.2016 ಹಾಗೂ 06.03.2018.
2. ನಿಗಮದ ಸಮ ಸಂಖ್ಯೆ ಪತ್ರದ ದಿನಾಂಕ: 26.08.2019.
3. ನಿಗಮದ ಸಮ ಸಂಖ್ಯೆ ಪತ್ರದ ದಿನಾಂಕ: 24.09.2019.
4. ನಿಗಮದ ಸಮ ಸಂಖ್ಯೆ ಪತ್ರದ ದಿನಾಂಕ: 18.11.2019.

******

ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/40360/2016-17, ದಿನಾಂಕ: 08.09.2016 ರ ಪ್ರಕಾರ 2018 ನೇ ಸಾಲಿನಲ್ಲಿ ದಿನಾಂಕ: 06.03.2018 ರ ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆಯನ್ವಯ, ಕವಿಪ್ರನಿನಿಯಲ್ಲಿ ನೇರ ನೇಮಕಾತಿ ಹೊಂದಿರುವ ಸಹಾಯಕ ಇಂಜಿನಿಯರ್ (ವಿ) ರವರುಗಳ ಪರೀಕ್ಷಾರ್ಥ ಅವಧಿಯನ್ನು ಘೋಷಿಸಲು ಉಲ್ಲೇಖ-2, 3 ಮತ್ತು 4 ರಲ್ಲಿ ಪ್ರಸ್ತಾವನೆಗಳನ್ನು ಜರೂರಾಗಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಲು ಕೋರಲಾಗಿದ್ದು, ಆದರೆ ಇಲ್ಲಿಯವರೆಗೂ ಪ್ರಸ್ತಾವನೆಗಳು ನಿಗಮ ಕಾರ್ಯಾಲಯಕ್ಕೆ ಸಲ್ಲಿಕೆಯಾಗಿರುವುದಿಲ್ಲ ಆದ್ದರಿಂದ ಕವಿಪ್ರನಿನಿಯ ಎಲ್ಲಾ ವಲಯ ಕಛೇರಿಗಳ ಲೆಕ್ಕನಿಯಂತ್ರಣಾಧಿಕಾರಿಗಳ ಸಭೆಯನ್ನು ದಿನಾಂಕ: 06.07.2020 ರಂದು ಬೆಳಗ್ಗೆ 11-00 ಗಂಟೆಗೆ ನಿಗಮ ಕಚೇರಿ, ಕವಿಪ್ರನಿನಿ, ಕಾವೇರಿಭವನದಲ್ಲಿ ನಿಗದಿಪಡಿಸಲಾಗಿದೆ.

ಈ ಸಭೆಗೆ ತಮ್ಮ ವ್ಯಾಪ್ತಿಗೆ ಒಳಪಡುವ ಕಚೇರಿಗಳಲ್ಲಿ 2018ನೇ ಸಾಲಿನಲ್ಲಿ ನೇಮಕವಾಗಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಇಂಜಿನಿಯರ್ (ವಿ) ರವರುಗಳ ವಿವರಗಳನ್ನು ನಿಗದಿ ಪಡಿಸಿದ ಅನುಬಂಧದಲ್ಲಿ ನಮೂದಿಸಿ, ಆಂತರಿಕ ಪರಿಶೀಲನೆಗೆ ಒಳಪಡಿಸಿದ ಅನುಬಂಧ ಹಾಗೂ ಸಂಬಂಧಿಸಿದ ದಾಖಲೆಗಳನ್ನು ಕ್ರೋಢೀಕರಿಸಿ ಈ ಕೆಳಕಂಡ ವಿವರಗಳನ್ನು ಪರಿಶೀಲಿಸಿ ಸದರಿ ದಾಖಲೆಗಳೊಂದಿಗೆ ನಿಗಮ ಕಚೇರಿಗೆ ಹಾಜರಾಗಲು ಕೋರಿದೆ.

I. ಅನುಬಂಧದ ಅನುಸಾರ ಸಹಾಯಕ ಇಂಜಿನಿಯರ್ (ವಿ) ರವರುಗಳ ವಿವರಗಳನ್ನು ನಮೂದಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.
II. ಒಂದು ವೇಳೆ ವೃತ್ತಿಪೂರ್ವ ತರಬೇತಿಯಲ್ಲಿ ಉತ್ತೀರ್ಣರಾಗದೆ ಇದ್ದರೆ ಹಾಗು ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದೆ ಇದ್ದರೆ ಪ್ರಸ್ತಾವನೆಯಲ್ಲಿ ನಮೂದಿಸಿ ಸಲ್ಲಿಸುವುದು.
III. ನೇಮಕಾತಿ ಷರತ್ತಿನ ಅನುಸಾರ ಕಂಪ್ಯೂಟರ್ ಕೋರ್ಸ್‌ಗಳಲ್ಲಿ ಉತ್ತೀರ್ಣಗೊಂಡ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ದಾಖಲೆಗಳೊಂದಿಗೆ ಲಗತ್ತಿಸಿರುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.
IV. ವಲಯ/ವೃತ್ತ/ವಿಭಾಗೀಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಹಾಯಕ ಇಂಜಿನಿಯರ್ (ವಿ) ರವರುಗಳ ಇಲಾಖಾ ವಿಚಾರಣೆಯ ಮಾಹಿತಿಯನ್ನು ಪ್ರತ್ಯೇಕವಾಗಿ ಒದಗಿಸುವುದು.

| ನಿರ್ದೇಶಕರು (ಆಡಳಿತ ಮತ್ತು ಮಾ.ಸಂ) ರವರಿಂದ ಅನುಮೋದಿಸಲ್ಪಟ್ಟಿದೆ. |
|---|

18/6/2020
ಉಪಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ)
ಕವಿಪ್ರನಿನಿ

ಪ್ರತಿಗಳು:
1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ.
2. ಎಲ್ಲಾ ಲೆಕ್ಕನಿಯಂತ್ರಣಾಧಿಕಾರಿಗಳು, ವಲಯ ಕಚೇರಿ, ಕವಿಪ್ರನಿನಿ ರವರ ಸೂಕ್ತ ಕ್ರಮಕ್ಕಾಗಿ.
3. ನಿರ್ದೇಶಕರು (ಆ ಮತ್ತು ಮಾ.ಸಂ) ರವರ ಆಪ್ತಕಾರ್ಯದರ್ಶಿಯವರಿಗೆ.
4. www.kptcl.com ವೆಬ್‌ಸೈಟ್ ನಲ್ಲಿ ಪ್ರಕಟಿಸಲು.